**O.S.No.146/2021 PW.**

ದಿಃ **06-03-2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದು ಪಾಟೀ ಸವಾಲು ಪ್ರತಿವಾದಿ **3** ಮತ್ತು **4** ಪರ **Sri.SHC** ವಕೀಲರವರಿಂದಃ

**03.** ನನ್ನ ತಂದೆಯ ತಂದೆ ಹೆಸರು ವೀರಪ್ಪ. ಸರ್ವೆ ನಂಬರ್ **556/3** ವಿಸ್ತೀರ್ಣ **4.70** ಎಕರೆ ಆಸ್ತಿಯನ್ನು ಹೊರತು ಪಡಿಸಿ ಉಳಿದ ಆಸ್ತಿಗಳು ನನ್ನ ತಂದೆ ಹಾಗೂ ಅಜ್ಜನ ಆಸ್ತಿಗಳಲ್ಲ ಎಂದರೆ ಸರಿ. ಸರ್ವೆ ನಂಬರ್ **556/3** ವಿಸ್ತೀರ್ಣ **4.70** ಎಕರೆ ಆಸ್ತಿಯನ್ನು ಹೊರತು ಪಡಿಸಿ ಉಳಿದ ಆಸ್ತಿಗಳು ಕೊಗಳಿ ವಿಠೋಬ್ಬಪ್ಪ ರವರ ಆಸ್ತಿಗಳು ಎಂದರೆ ಸರಿ. ಕೊಗಳಿ ವಿಠೋಬ್ಬಪ್ಪನು ತನ್ನ ಜೀವಿತ ಅವದಿಯಲ್ಲಿ **3** ನೇ ಪ್ರತಿವಾದಿಗೆ ವಿಲ್ಲನ್ನು ಮಾಡಿಕೊಟ್ಟಿರುತ್ತಾನೆ ಎಂದರೆ ಸರಿ. ಸರ್ವೆ ನಂಬರ್ **556/3** ಆಸ್ತಿಯನ್ನು ಹೊರತು ಉಳಿದ ದಾವ ಆಸ್ತಿಗಳು **3** ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತವೆ ಸರಿ. **1** ನೇ ದಾವ ಆಸ್ತಿಯನ್ನು ಹೊರತು ಇನ್ನು ಉಳಿದ ದಾವ ಆಸ್ತಿಗಳಲ್ಲಿ ನನಗೆ ಹಕ್ಕು ಇುವುದಿಲ್ಲ ಎಂದರೆ ಸರಿಯಲ್ಲ.

**04. B** ಶೆಡ್ಯೂಲ್ **1** ರಿಂದ **3** ನೇ ಆಸ್ತಿಗಳ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೀರ ಎಂದರೆ ಹಾಜರು ಪಡಿಸಿರುತ್ತೇನೆ. ಈಗ ಸಾಕ್ಷಿಗೆ ಅವರ ಪರ ಗುರುತಿಸಲಾದ ದಾಖಲೆಗಳನುತೋರಸಿ **B** ಶೆಡ್ಯೂಲ್ **1** ರಿಂದ **3** ನೇ ಆಸ್ತಿಗಳ ದಾಖಲೆಗಳನ್ನು ತೋರಿಸಿ ಎಂದಾಗ ನನಗೆ ಗೊತ್ತಾರುದಿಲ್ಲ ಎಂದು ನುಡಿಯುತ್ತಾರೆ . **B** ಶೆಡ್ಯೂಲ್ **1** ರಿಂದ **3** ನೇ ಆಸ್ತಿಗಳ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ನನಗೆ ಏನು ಗೊತ್ತಾಗುವುದಿಲ್ಲ.

**05.** ವಿಠೊಬ್ಬಪ್ಪನು ವಿಲ್ಲನು ಯಾವಾಗ ಬರೆಸಿ ಕೊಟ್ಟಿರುತ್ತಾರಿ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲ. ಸದರಿ ವಿಲ್ಲನಲ್ಲಿ ಯಾವ ಯಾವ ಸರ್ವೆ ನಂಬರ ಮತ್ತು ಆಸ್ತಿಗಳನ್ನು ಬರೆಸಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ವಿಠೊಬ್ಬಪ್ಪನು ಬರೆದಿರುವ ವಿಲ್ಲನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ವಿಠೊಬ್ಬಪ್ಪನು ಯಾವುದೇ ವಿಲ್ಲನ್ನು ಬರೆದು ಕೊಟ್ಟುರುವುದಿಲ್ಲ ಎಂದರೆ ಸಾಕ್ಷಿಯು ಸುಮನ್ನೆ ಇರುತ್ತಾರೆ.

ವಿಠೊಬ್ಬಪ್ಪನು ವಿಲ್ಲನ್ನು ಬರೆದುಕೊಟ್ಟಿದ್ದರೆ ನಾನು ನ್ಯಾಯಾಲಯಕ್ಕೆ ಹಾಜರು ಪರಿಸುತ್ತಿದ್ದೇ, ಯಾವುದೇ ವಿಲ್ಲನ್ನು ಬರೆದು ಕೊಡದೇ ಇರುವುದರಿಂದ ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ನಮ್ಮ ಹೆಸರಿನಲ್ಲಿ ಆಸ್ತಿ ಇದ್ದದ್ದನ್ನು ಇಲ್ಲ ಎಂದು ಹೇಳಿದರೆ ನಾನು ಏನು ಮಾಡಲಿ. ದಾವಾ ಹಾಕುವ ಸಮಯದಲ್ಲಿ ವಿಠೊಬ್ಬಪ್ಪನು ವಿಲ್ಲನ್ನು ಬರೆದುಕೊಟ್ಟಿರುತ್ತಾರೆ ಎಂಬ ಮಾಹಿತಿಯನ್ನು ವಕೀಲರಿಗೆ ನೀಡಿರುತ್ತೇನೆ . ಸರ್ವೆ ನಂಬರ್ **556/3** ಆಸ್ತಿಯನ್ನು ಹೊರತು ಪಡಿಸಿ ಉಳಿದ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಪಹಣಿಗಳು ಇಬ್ಬರ ಹೆಸರಿನಲ್ಲಿ ಇರುತ್ತೇವೆ.

**06.** ನಿಮ್ಮ ಪ್ರಮಾಣ ಪತ್ರದ ಸಂಗತಿಗಳು ನಿಮಗೆ ಗೊತ್ತಿರುತ್ತವೆಯೇ ಎಂದರೆ ಸಾಕ್ಷಿಯು ಸುಮನ್ನೆ ಇರುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.